# ಸ್ಟಿಂಕ್‌ಬಗ್ ಸಂಸಾರ !



ಮೊಟ್ಟೆ ಇಟ್ಟ ನಂತರ ದೊಡ್ಡ ಕೀಟಗಳು ಮತ್ತೆ ಕಾಣಿಸಿಕೊಳ್ಳುವುದೇ ಇಲ್ಲ. ಬಹುಶ ಅವುಗಳ ಜೀವಿತಾವಧಿ ಅಷ್ಟೇ ಇರುತ್ತದೇನೋ? ಮೊಟ್ಟೆ ಇಡುವುದೊಂದೆ ಜೀವಿತದ ಉದ್ದೇಶವೇನೋ ಎಂಬಂತೆ ಕಣ್ಮರೆಯಾಗುತ್ತವೆ.

■ ಚಿತ್ರ– ಬರಹ :
**ಕೇಶವ ಕುಡ್ಲ**

ಚಪ್ಪರದ ತುಂಬೆಲ್ಲ ಕಂದು ಕೀಟಗಳು. ಇಷ್ಟೊಂದು ಸಂಖ್ಯೆಯಲ್ಲಿ ಬೀಡು ಬಿಟ್ಟಿರುವ ಕೀಟಗಳ ಜೀವನ ವಿಧಾನವನ್ನು ಅಧ್ಯಯನ ಮಾಡುವ ಸದವಕಾಶ! ಈ ಹುಳಗಳ ಜೀವನಚಕ್ರ ಮಿಲನ, ಮೊಟ್ಟೆ ಇಡುವಿಕೆ, ಮರಿ ಹುಟ್ಟುವುದು ಇವನ್ನೆಲ್ಲ ದಾಖಲಿಸುವ ಉತ್ಸಾಹದಿಂದ ಕ್ಯಾಮೆರಾ ಹಿಡಿದುಕೊಂಡು ಹಿಂಬಾಲಿಸಿದ್ದರ ಫಲವಾಗಿ ಈ ಚಿತ್ರಗಳು ದಕ್ಕಿದವು. ಕೆಲವು ಚಿತ್ರ ಮತ್ತು ಮಾಹಿತಿ ಇಲ್ಲಿದೆ.

★ ★ ★

ಹೆಮಿಪ್ಟೆರ ವರ್ಗಕ್ಕೆ ಸೇರಿದ ಸ್ಟಿಂಕ್‌ಬಗ್ ಎಂಬ ರೆಕ್ಕೆ ಇರುವ ಕೀಟಗಳ ಗುಂಪಿದು. ಎಳೆ ಬಳ್ಳಿ ಮತ್ತು ಕಾಂಡಗಳ ತಿರುಳಿಗೆ ತಮ್ಮ ಚೂಪಾದ ಕೊಳವೆಯಂತಹ ಹೀರುನಳಿಕೆ ನುಗ್ಗಿಸಿ ಗಿಡದ ಜೀವರಸವನ್ನು ಆಹಾರವಾಗಿ ಪಡೆಯುವ ಇವು ಸಹಜವಾಗಿಯೆ ರೈತರಿಗೆ ಉಪದ್ರವಕಾರಿ ಕೀಟಗಳು. ಮುಟ್ಟಿದ ಕೂಡಲೆ ಶತ್ರುಭಯದಿಂದ ರಕ್ಷಣಾತಂತ್ರವಾಗಿ ಅತೀ ಕೆಟ್ಟ ವಾಸನೆಯ ದ್ರವವನ್ನು ಗಂಟಲಲ್ಲಿರುವ ಎರಡು ಗ್ರಂಥಿಗಳಿಂದ ಹೊರಸೂಸುವ ಈ ಕೀಟ ವರ್ಗಕ್ಕೆ ಸ್ಟಿಂಕ್ ಬಗ್ ಅಥವಾ ವಾಸನೆ ಹುಳ (ಸ್ಟಿಂಕ್ ಎಂದರೆ ಸಹಿಸಲಸಾಧ್ಯವಾದ ದುರ್ವಾಸನೆ ಎಂದರ್ಥ) ಎಂಬುದು ಸಲ್ಲುವ ವಾಡಿಕೆಯ ಹೆಸರಾದರೂ ಈ ವರ್ಗದಲ್ಲಿ ಸಾವಿರಾರು ವೈವಿಧ್ಯವಿದ್ದು ಹಲವಾರು ಬಣ್ಣ, ಆಕಾರದಲ್ಲಿವಿಕಾಸಗೊಂಡಿವೆ.

ಆದರೆ ಈ ವರ್ಗದಲ್ಲಿ ಹಸಿರು ಬಣ್ಣದ, ಕಂದು ಬಣ್ಣದ ಮತ್ತು ಬೂದು ಬಣ್ಣದ ವಾಸನೆ ಹುಳಗಳು ಹೆಚ್ಚಾಗಿ ಕಂಡು ಬರುತ್ತವೆ. ಸಾಮಾನ್ಯವಾಗಿ ಇವುಗಳ ಬಣ್ಣ